


ಏಕಾಏಕಿ ತಂಗಿಯರ ಕೋಣೆಗೆ ನುಗ್ಗುತ್ತಾಳೆ. ಅವರಿಗೂ ಅಕ್ಕನ ವಿಚಿತ್ರ ನಡವಳಿಕೆ ಒಂದು ದೊಡ್ಡ ಆಶ್ಚರ್ಯ!

ಒಂದೊಂದು ವಾರ ಅವಳು, ದಿನವೆಲ್ಲಾ ನಗು ನಗುತ್ತಿದ್ದು, ತುಂಬಾ ಆಸಕ್ತಿಯಿಂದ ಸಿಂಗರಿಸಿಕೊಂಡು ತಂಗಿಯರೊಡನೆ, ಜಾಲಿಯಾಗಿರೋ ಸಿನಿಮಾಗಳನ್ನೇ ಆರಿಸಿಕೊಂಡು ಹೊರಡುತ್ತಾಳೆ. ಕತ್ತಲೆಯಲ್ಲಿ ಕಳೆದ ಆ ಮೂರು ಗಂಟೆಗಳೂ ಖುಷಿಯಾಗಿ, ಮಾತು ಮಾತಿಗೂ ನಕ್ಕು ನಗಿಸಿ, ತಂಗಿಯರ ಬೆನ್ನನ್ನು ಗುದ್ದುತ್ತಲೇ ಇರುತ್ತಾಳೆ. ಬರುವಾಗ ಹೋಟೆಲ್‌ನಲ್ಲೂ ಅನೇಕ ಜೋಕುಗಳನ್ನು ಹಾರಿಸುತ್ತಾಳೆ. ತಂಗಿಯರ ಮನಸ್ಸಿಗೂ ಅಕ್ಕನ ಮುದ್ದುಮುಖದ ನಗು ಇನ್ನಷ್ಟು ನೋಡಬೇಕು, ಕೇಳಬೇಕು, ಎನಿಸುತ್ತದೆ. ಅವಳ ಜೊತೆ ಇರುವಾಗ ಸಂತಸದ ಮುದ್ದೆಗಳಾಗುತ್ತಾರೆ. ಆದರವಳ ಮೂಡು ಯಾವಾಗ ಬದಲಾಗುವುದೋ...ಕ್ಷಣ ಚಿತ್ತ..ಕ್ಷಣ ಪಿತ್ತ.

ಅದೇ ಇನ್ನು ಕೆಲವು ವಾರಗಳಲ್ಲಿ ಬಂದ ತತ್‌ಕ್ಷಣ ಯಾರನ್ನೂ ಮಾತನಾಡಿಸದೇ ಸಿಡಾರನೆ ಮುಸುಕಿನ ಗುಪ್ಪೆಯಾಗಿ ಮಂಚದ ಮೇಲೆ ಸುರುಳಿಯಾಗಿ ಬಿದ್ದುಕೊಂಡು ಬಿಡುತ್ತಾಳೆ. ಊಟದ ಹೊತ್ತಾದರೂ